

# ‘ಗ್ಲಾಮರಸ್’ ಸೂತ್ರದಾಚೆಗಿನ ಶರಣ್ಯ

■ ಸುಮಲತಾ ಎನ್.

ಮಾಡೆಲಿಂಗ್, ಕಿರುತೆರೆ, ಸಿನಿಮಾರಂಗ – ಮನರಂಜನಾ ಕ್ಷೇತ್ರದ ವಿವಿಧ ಕವಲುಗಳಲ್ಲಿ ತಮ್ಮನ್ನು ನಿರೂಪಿಸಿಕೊಳ್ಳುತ್ತಿರುವ ನಟಿ ಶರಣ್ಯ ಶೆಟ್ಟಿ ಅವರ ಮುಂದೆ ಹಲವು ಸಿನಿಮಾಗಳಿವೆ. ‘1980’, ‘ಹುಟ್ಟುಹಬ್ಬದ ಶುಭಾಶಯಗಳು’, ‘ನಗುವಿನ ಹೂಗಳ ಮೇಲೆ’ ಸಿನಿಮಾಗಳಲ್ಲಿ ನಟಿಸಿರುವ ಅವರು, ಈಗ ಗಣೇಶ್ ಅಭಿನಯದ ‘ಕೃಷ್ಣಂ ಪ್ರಣಯ ಸಖಿ’ಯಲ್ಲಿ ನಟಿಸುತ್ತಿದ್ದಾರೆ. ಈವರೆಗಿನ ತಮ್ಮ ಪಯಣದ ಬಗ್ಗೆ ಅವರಿಲ್ಲಿ ಮಾತನಾಡಿದ್ದಾರೆ.

◆ **ಸದ್ಯಕ್ಕೆ ಯಾವ ಸಿನಿಮಾಗಳಲ್ಲಿ ತೊಡಗಿಕೊಂಡಿದ್ದೀರಿ?**

ಕನ್ನಡದಲ್ಲಿ ‘ಕೃಷ್ಣಂ ಪ್ರಣಯ ಸಖಿ’ ಬಿಡುಗಡೆಯಾಗಬೇಕಿದೆ. ನಟ ಅನೀಶ್ ಅವರೊಂದಿಗೆ ಸಿನಿಮಾವೊಂದರಲ್ಲಿ ಅಭಿನಯಿಸುತ್ತಿದ್ದೇನೆ. ತೆಲುಗು ಭಾಷೆಯ ಒಂದೆರಡು ಸಿನಿಮಾಗಳ ಮಾತುಕತೆಯೂ ನಡೆಯುತ್ತಿದೆ.

◆ **ಮಾಡೆಲಿಂಗ್‌ನಲ್ಲಿದ್ದವರು ನೀವು, ನಟನೆಯೆಡೆಗೆ ಹೊರಳಿದ್ದು ಹೇಗೆ?**

ಚಿಕ್ಕವಯಸ್ಸಿನಲ್ಲಿ ಭರತನಾಟ್ಯ ಅಭ್ಯಾಸ ಮಾಡುತ್ತಿದ್ದೆ. ಶಾಲೆಯಲ್ಲೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸದಾ ಇರುತ್ತಿದ್ದೆ. ಓದುವುದರಲ್ಲೂ ಮುಂದಿದ್ದೆ. ನನ್ನನ್ನು ‘ಆಲ್‌ರೌಂಡರ್’ ಎಂದು ಕರೆಯುತ್ತಿದ್ದರು. ನಟನೆಯೆಡೆಗೆ ಆಸಕ್ತಿಯೇನೋ ಇತ್ತು. ಆದರೆ ವೃತ್ತಿಯಾಗಿ ತೆಗೆದುಕೊಳ್ಳುತ್ತೇನೆಂಬುದು ತಿಳಿದಿರಲಿಲ್ಲ. ಪಿಯು ಓದುವಾಗಲೇ ಮಾಡೆಲಿಂಗ್ ಲೋಕಕ್ಕೆ ಬಂದೆ. ‘ಮಿಸ್ ಸೌತ್ ಇಂಡಿಯಾ 2018’ ಸ್ಪರ್ಧೆಯಲ್ಲಿ ಭಾಗವಹಿಸಿದ್ದೆ. ಅದಾದ ಮೇಲೆ ನನ್ನ ಪಾಕೆಟ್ ಮನಿ ನಾನೇ ಸಂಪಾದಿಸಬೇಕು ಎಂದುಕೊಂಡೆ. ಮೂರು ವರ್ಷ ಓದಿನೊಂದಿಗೆ ಮಾಡೆಲಿಂಗ್ ಕೂಡ ಮುಂದುವರೆಸಿದೆ. ಆ್ಯಡ್‌ಶೂಟ್‌ಗಳನ್ನು ಮಾಡುತ್ತಿದ್ದೆ. ಆಗ ನಟನೆಯೆಡೆಗೆ ಪುಟ್ಟ ಪ್ರಯತ್ನ ನನ್ನ ಕಡೆಯಿಂದ ಆಯಿತು. ಆತ್ಮವಿಶ್ವಾಸ ಬೆಳೆಯಿತು. ಯಾಕೆ ನಟನೆಗೆ ಬರಬಾರದು ಎಂದು ಗಂಭೀರವಾಗಿ ಯೋಚಿಸಿ ಈ ಕ್ಷೇತ್ರದಲ್ಲಿ ತೊಡಗಿದೆ.

◆ **ಮಾಡೆಲಿಂಗ್– ಕಿರುತೆರೆ– ಸಿನಿಮಾ– ಈ ಹಾದಿ ರೂಪುಗೊಂಡಿದ್ದು ಹೇಗೆ?**

ಮಾಡೆಲಿಂಗ್ ಮಾಡುತ್ತಲೇ ಸಾಕಷ್ಟು ಧಾರಾವಾಹಿಗಳಿಗೆ ಆಡಿಷನ್ ನೀಡಿದೆ. ಆಯ್ಕೆಯಾಗಿರಲಿಲ್ಲ. ‘ಗಟ್ಟಿಮೇಳ’ ಧಾರಾವಾಹಿ ನನಗೆ ಉತ್ತಮ ಅವಕಾಶ ಒದಗಿಸಿತು, ಖುಷಿ ಕೊಟ್ಟಿತು. ಆಮೇಲೆ ಸಿನಿಮಾಗಳಲ್ಲಿ ಸಣ್ಣ ಪುಟ್ಟದಾದ, ಸಿಕ್ಕಂಥ ಪಾತ್ರಗಳನ್ನು ಮಾಡುತ್ತಿದ್ದೆ. ಎಲ್ಲೋ ಯಾರೋ ನನ್ನನ್ನು ಗುರುತಿಸಬಹುದು ಎಂಬ ಭರವಸೆಯಿಂದ. ಆಮೇಲೆ ಪ್ರಿಯಾಂಕಾ ಉಪೇಂದ್ರ ಅವರೊಟ್ಟಿಗೆ ‘1980’ ಸಿನಿಮಾದಲ್ಲಿ ಪೂರ್ಣಪ್ರಮಾಣದಲ್ಲಿ ಮಾಡಿದೆ. ಅದಕ್ಕೆ ‘ಉತ್ತಮ ಡೆಬ್ಯು ನಟಿ’ ಎಂದು ಸೈಮಾ ಪ್ರಶಸ್ತಿ